# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ–೪ಎ<br>Part – IVA | ಬೆಂಗಳೂರು, ಬುಧವಾರ, ೧೭, ಡಿಸೆಂಬರ್,೨೦೨೫ ( ಮಾರ್ಗಶಿರಾ,೨೬, ಶಕವರ್ಷ, ೧೯೪೭)<br>BENGALURU, WEDNESDAY, 17, DECEMBER, 2025 (MARGASHIRA, 26, SHAKAVARSHA, 1947) | ನಂ.೮೧೮<br>No. 818 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಎಂಟನೇ ಅಧಿವೇಶನ**

## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–87)**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ(ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು 2025ರ ಸೆಪ್ಟೆಂಬರ್ 29ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 2ನೇ ಪ್ರಕರಣದ, ಖಂಡ (ಎನ್)ರಲ್ಲಿ "ದವಾಖಾನೆ" ಎಂಬ ಪದದ ತರುವಾಯ "ಅಥವಾ ಮಾನಸಿಕ ಆರೋಗ್ಯ ಸಂಸ್ಥೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 4ರ ಕೋಷ್ಟಕದಲ್ಲಿನ (ಡಿ) ಬಾಬು ಮತ್ತು ಅದರ ನಮೂದುಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) **ಭಾರತೀಯ ವೈದ್ಯಕೀಯ** ಸಂಘದಿಂದ ಒಬ್ಬ ಸದಸ್ಯ ಮತ್ತು ನೋಂದಾಯಿತ ವೈದ್ಯಕೀಯ ಸಂಸ್ಥೆ ಅಥವಾ ಆಯುಷ್ ವೈದ್ಯಕೀಯ ವೃತ್ತಿನಿರತರ ಸಂಘವನ್ನು ಪ್ರತಿನಿಧಿಸುವ ಒಬ್ಬ ಸದಸ್ಯ – ಸದಸ್ಯರು."

**4. ಪ್ರಕರಣ 5ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 5ರಲ್ಲಿ,-

(i) ಪ್ರಕರಣದ ಶೀರ್ಷಿಕೆ "ನೋಂದಣಿಗಾಗಿ ಅರ್ಜಿ" ಎಂಬುದರ ಬದಲಿಗೆ "ತಾತ್ಕಾಲಿಕ ನೋಂದಣಿ ಮತ್ತು ನೋಂದಣಿ ನವೀಕರಣಕ್ಕಾಗಿ ಅರ್ಜಿ" ಎಂಬ ಶೀರ್ಷಿಕೆಯನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ನಿವಾರಣಾ ಪ್ರಾಧಿಕಾರಕ್ಕೆ" ಎಂಬ ಪದಗಳ ತರುವಾಯ "ತಾತ್ಕಾಲಿಕ ನೋಂದಣಿ ಮತ್ತು ನೋಂದಣಿ ನವೀಕರಣಕ್ಕಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

**5. ಹೊಸ ಪ್ರಕರಣ 5ಎ, 5ಬಿ ಮತ್ತು 5ಸಿ ಸೇರ್ಪಡೆ.-** ಮೂಲ ಅಧಿನಿಯಮದ ಪ್ರಕರಣ 5ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**5ಎ. ತಾತ್ಕಾಲಿಕ ನೋಂದಣಿಯ ಮಂಜೂರಾತಿ ಅಥವಾ ನವೀಕರಣ.-** (1) ಅರ್ಜಿಗಳನ್ನು ಸ್ವೀಕರಿಸಿದ ಮೇಲೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಹತ್ತು ದಿನಗಳ ಅವಧಿಯೊಳಗಾಗಿ ಅರ್ಜಿದಾರರಿಗೆ ಯಾವುದೇ ವಿಚಾರಣೆಯಿಲ್ಲದೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವಿವರಗಳನ್ನು ಒಳಗೊಂಡಿರುವ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ನೀಡತಕ್ಕದ್ದು. ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವು ಆನಂತರದ ನವೀಕರಣಕ್ಕೆ ಒಳಪಟ್ಟು ಆರು ತಿಂಗಳುಗಳವರೆಗೆ ಸಿಂಧುವಾಗಿರತಕ್ಕದ್ದು.

(2) ತಾತ್ಕಾಲಿಕ ನೋಂದಣಿಯ ನವೀಕರಣ ಅರ್ಜಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ಶುಲ್ಕಗಳೊಂದಿಗೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ಸಲ್ಲಿಸಬಹುದು.

(3) ತಾತ್ಕಾಲಿಕ ನೋಂದಣಿ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಸರ್ಕಾರ ಅಧಿಸೂಚಿಸಿದ ಅಥವಾ ನಿರ್ದಿಷ್ಟಪಡಿಸಿದ ಮಾನದಂಡಗಳಿಗೆ ಸಂಬಂಧಿಸಿದಂತೆ, ಮಾನದಂಡಗಳ ಅಧಿಸೂಚನೆಯ ದಿನಾಂಕದಿಂದ ಒಂದು ವರ್ಷದ ಅವಧಿ ಅಥವಾ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಲ್ಲಿ ಯಾವುದು ನಂತರವೋ ಆ ಅವಧಿಯನ್ನು ಮೀರಿ ತಾತ್ಕಾಲಿಕ ನೋಂದಣಿಯನ್ನು ನವೀಕರಿಸತಕ್ಕದ್ದಲ್ಲ.

**5ಬಿ. ನೋಂದಣಿ ಅವಧಿ ಮುಕ್ತಾಯಗೊಂಡ ತಾತ್ಕಾಲಿಕವಾಗಿ ನೋಂದಾಯಿತ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪಟ್ಟಿಯ ಪ್ರಕಟಣೆ.-** ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅವಧಿ ಮುಕ್ತಾಯಗೊಂಡ, ತಾತ್ಕಾಲಿಕವಾಗಿ ನೋಂದಾಯಿತ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

**5ಸಿ. ಶಾಶ್ವತ ನೋಂದಣಿ ಅಥವಾ ನವೀಕರಣಕ್ಕಾಗಿ ಅರ್ಜಿ.-** (1) ಶಾಶ್ವತ ನೋಂದಣಿ ಅಥವಾ ನೋಂದಣಿ ನವೀಕರಣವನ್ನು ಪಡೆಯಲು ಇಚ್ಛಿಸುವ ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು, ಸಿಂಧುವಾದ ತಾತ್ಕಾಲಿಕ ನೋಂದಣಿಯೊಂದಿಗೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ, ಪ್ರಕರಣ 6ರಲ್ಲಿ ನಿರ್ದಿಷ್ಟಪಡಿಸಿದ ಪೂರ್ವಾಪೇಕ್ಷಿತಗಳು (pre requisites) ಮತ್ತು ಮಾನದಂಡಗಳನ್ನು ಪೂರೈಸುವುದಕ್ಕೊಳಪಟ್ಟು, ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ಶುಲ್ಕಗಳೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2025ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಎಲ್ಲಾ ನೋಂದಾಯಿತ ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ತಾತ್ಕಾಲಿಕವಾಗಿ ನೋಂದಾಯಿತ ಸಂಸ್ಥೆಗಳೆಂದು ಭಾವಿಸತಕ್ಕದ್ದು ಮತ್ತು ಅವುಗಳ ನೋಂದಣಿಯು ಅವುಗಳ ಸಿಂಧುತ್ವವು ಮುಕ್ತಾಯಗೊಳ್ಳುವವರೆಗೆ ಸಿಂಧುವಾಗಿರತಕ್ಕದ್ದು.

(3) ಪ್ರಮಾಣಪತ್ರದ ಸಿಂಧುತ್ವದ ಅವಧಿ ಮುಕ್ತಾಯಗೊಳ್ಳುವ ತೊಂಬತ್ತು ದಿನಗಳಿಗೆ ಮೊದಲು ನೋಂದಣಿಯ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು."

**6. ಪ್ರಕರಣ 6ರ ಪ್ರತಿಯೋಜನೆ.-** ಮೂಲ ಅಧಿನಿಯಮದ ಪ್ರಕರಣ 6ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**6. ಖಾಸಗಿ ವೈದ್ಯಕೀಯ ಸಂಸ್ಥೆಗಳ ಶಾಶ್ವತ ನೋಂದಣಿ ಅಥವಾ ನವೀಕರಣಕ್ಕಾಗಿ ಪೂರ್ವಾಪೇಕ್ಷಿತಗಳು.-** ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಶಾಶ್ವತ ನೋಂದಣಿ ಅಥವಾ ನವೀಕರಣವನ್ನು ನೀಡುವ ಮೊದಲು ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಗಾಗಿ ಈ ಮುಂದಿನ ಪೂರ್ವಾಪೇಕ್ಷಿತಗಳನ್ನು ಪೂರೈಸುತ್ತವೆಯೇ ಎಂಬುದನ್ನು ಪರಿಗಣಿಸತಕ್ಕದ್ದು,-

(i) ಅದರ ಆವರಣಗಳು ನೈರ್ಮಲ್ಯ ಪರಿಸರದಲ್ಲಿವೆಯೇ ಮತ್ತು ಅದನ್ನು ಅನ್ಯಥಾ ಸ್ಥಾಪಿಸುವ ಅಥವಾ ಸ್ಥಾಪಿಸಲು ಬಯಸುವ ಉದ್ದೇಶಕ್ಕೆ ಸೂಕ್ತವಾಗಿದೆಯೇ;

(ii) ಅದು ಅರ್ಹ ವೈದ್ಯರು, ಅರ್ಹರಾದ ಮತ್ತು ತರಬೇತಿ ಪಡೆದ ಅರೆ-ವೈದ್ಯಕೀಯ ಸಿಬ್ಬಂದಿಯೊಂದಿಗೆ ತಕ್ಕಷ್ಟು ನೌಕರರನ್ನು ಹೊಂದಿದೆ ;

(iii) ಅದರ ವಿವಿಧ ಕಾರ್ಯಗಳು, ಉಪಕರಣಗಳು ಮತ್ತು ಇತರ ಮೂಲಸೌಕರ್ಯ ಸೌಲಭ್ಯಗಳನ್ನು ನಿರ್ವಹಿಸಲು ಸಾಕಷ್ಟು ಸ್ಥಳಾವಕಾಶವಿರುವ ಅಗತ್ಯ ಕಟ್ಟಡಗಳನ್ನು ಅದು ಹೊಂದಿದೆಯೇ;

(iv) ಅದು ಪ್ರಕರಣ 9ರಲ್ಲಿ ಉಲ್ಲೇಖಿಸಲಾದ ಮಾನದಂಡಗಳನ್ನು ಅನುಸರಿಸುತ್ತದೆಯೇ;

(v) ಅದು ಸಿಂಧುವಾದ ತಾತ್ಕಾಲಿಕ ನೋಂದಣಿ ಪ್ರಮಾಣಪತ್ರವನ್ನು ಹೊಂದಿದೆಯೇ;

(vi) ರಸ್ತೆ ಅಪಘಾತ ವರದಿಯಾದ ಸಂದರ್ಭದಲ್ಲಿ ರೋಗಿಗಳ ದತ್ತಾಂಶ ಮತ್ತು ವೈದ್ಯಕೀಯ ವರದಿಗಳನ್ನು ಒದಗಿಸಲು ಅದನ್ನು ಇ-ಡಿಎಆರ್ ಪೋರ್ಟಲ್‌ನಲ್ಲಿ ನೋಂದಾಯಿಸಲಾಗಿದೆಯೇ; ಮತ್ತು

(vii) ನಿಯಮಿಸಬಹುದಾದಂಥ ಇತರೆ ಅಂಶಗಳು;

ಪರಂತು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ, ಸರ್ಕಾರಿ ಆಸ್ಪತ್ರೆಯಿಂದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳ ಒಡೆತನದಲ್ಲಿರುವ ಅಥವಾ ಅವುಗಳಿಂದ ನಿಯಂತ್ರಿಸಲಾಗುವ ಸೊಸೈಟಿ ಅಥವಾ ಟ್ರಸ್ಟ್ ಅಥವಾ ಸ್ವಾಯತ್ತ ಸಂಸ್ಥೆಯಿಂದ ಪ್ರಾಯೋಜಿತ ಅಥವಾ ನಿರ್ವಹಿಸಲಾಗುತ್ತಿರುವ ಆಸ್ಪತ್ರೆಯಿಂದ 200 ಮೀಟರ್ ಸುತ್ತಳತೆಯಲ್ಲಿ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯವನ್ನು ಅನುಮತಿಸತಕ್ಕದ್ದಲ್ಲ."

**7. ಪ್ರಕರಣ 7ರ ಪ್ರತಿಯೋಜನೆ.-** ಮೂಲ ಅಧಿನಿಯಮದ ಪ್ರಕರಣ 7ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**7. ಅರ್ಜಿಗಳ ವಿಲೇವಾರಿ.-** (1) 5-ಸಿ ಪ್ರಕರಣದಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು 6 ಮತ್ತು 9ನೇ ಪ್ರಕರಣಗಳ ಉಪಬಂಧಗಳನ್ನು ಪರಿಗಣಿಸಿ ಮತ್ತು ಅಗತ್ಯವಾಗಬಹುದಾದಂಥ ವಿಚಾರಣೆಯ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು ಅಗತ್ಯವಿರುವ ಷರತ್ತುಗಳನ್ನು ಪೂರೈಸುತ್ತದೆ ಎಂಬುದನ್ನು ತಪಾಸಣಾ ಸಮಿತಿಯು ಮನಗಂಡ ತರುವಾಯ, ನಿಯಮಿಸಬಹುದಾದ ಷರತ್ತುಗಳಿಗೆ ಒಳಪಟ್ಟು ತೊಂಬತ್ತು ದಿನಗಳೊಳಗಾಗಿ ನೋಂದಣಿಯನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗಾಗಿ ಎಲ್ಲಾ ರೀತಿಯಲ್ಲೂ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಖಾಸಗಿ ವೈದ್ಯಕೀಯ ಸಂಸ್ಥೆಯು 6 ಮತ್ತು 9ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿರುವುದಕ್ಕಾಗಿ ಭಾರತ ಗುಣಮಟ್ಟ ಪರಿಷತ್ತಿನಿಂದ (QCI) ಮೂರನೇ ಪಕ್ಷಕಾರನ ತಪಾಸಣೆಗೆ ಒಳಗಾಗಲು ಸಿದ್ಧವಾಗಿದ್ದರೆ ಮತ್ತು ಆ ಬಗ್ಗೆ ಪ್ರಮಾಣಪತ್ರವನ್ನು ತಂದರೆ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿನಗಳೊಳಗೆ, ಉಪ-ಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ತಪಾಸಣೆಯಿಲ್ಲದೆ ನೋಂದಣಿ ಅಥವಾ ನವೀಕರಣವನ್ನು ಮಂಜೂರು ಮಾಡತಕ್ಕದ್ದು.

ಮತ್ತು ಪರಂತು, ಖಾಸಗಿ ವೈದ್ಯಕೀಯ ಸಂಸ್ಥೆಯು 6 ಮತ್ತು 9ನೇ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪೂರೈಸಿದ್ದಕ್ಕಾಗಿ, ಮೂರು ಅಧಿಮಾನ್ಯತಾ ಸಂಸ್ಥೆಗಳಾದ ರಾಷ್ಟ್ರೀಯ ಗುಣಮಟ್ಟ ಭರವಸೆ ಮಾನದಂಡಗಳು (NQAS), ಆಸ್ಪತ್ರೆ ಮತ್ತು ಆರೋಗ್ಯ ರಕ್ಷಣಾ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ (NABH) ಅಥವಾ ಗುಣಮಟ್ಟ ಮತ್ತು ಅಧಿಮಾನ್ಯತಾ ಸಂಸ್ಥೆ (QAI) ಇವುಗಳಲ್ಲಿ ಯಾವುದರಿಂದಲಾದರೂ, ಅಧಿಮಾನ್ಯತಾ ಪ್ರಮಾಣಪತ್ರವನ್ನು ತಂದರೆ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಹತ್ತು ದಿನಗಳೊಳಗೆ, ಉಪ-ಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ತಪಾಸಣೆಯಿಲ್ಲದೆ ನೋಂದಣಿ ಅಥವಾ ನವೀಕರಣವನ್ನು ಮಂಜೂರು ಮಾಡತಕ್ಕದ್ದು.

(2) ಉಪ-ಪ್ರಕರಣ (1)ರಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅರ್ಜಿದಾರರಿಗೆ ತಕ್ಷಣವೇ ತಿಳಿಸತಕ್ಕದ್ದು.

(3) ಉಪ-ಪ್ರಕರಣ (1)ರಡಿಯಲ್ಲಿ ನೀಡಲಾದ ಪ್ರತಿಯೊಂದು ನೋಂದಣಿ ಅಥವಾ ನವೀಕರಣವು ಐದು ವರ್ಷಗಳ ಅವಧಿಗೆ ಸಿಂಧುವಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಅಂಥ ವಿಧಾನದಲ್ಲಿ ಅರ್ಜಿಯನ್ನು ಸಲ್ಲಿಸಿದ ಮತ್ತು ಅಂಥ ಶುಲ್ಕವನ್ನು ಪಾವತಿಸಿದ ತರುವಾಯ ಐದು ವರ್ಷಗಳಿಗೊಮ್ಮೆ ನವೀಕರಿಸಬಹುದು.

(4) ಉಪ-ಪ್ರಕರಣ (1)ರ ಉದ್ದೇಶಕ್ಕಾಗಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನಿಯಮಿಸಬಹುದಾದಂಥ ಸದಸ್ಯರನ್ನು ಒಳಗೊಂಡ ತಪಾಸಣಾ ಸಮಿತಿಯನ್ನು ರಚಿಸಬಹುದು.

(5) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಅರ್ಜಿದಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಮತ್ತು ಅಂಥ ತಿರಸ್ಕಾರಕ್ಕೆ ಕಾರಣಗಳನ್ನು ದಾಖಲಿಸದ ಹೊರತು ನೋಂದಣಿ ಅಥವಾ ನವೀಕರಣದ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(6) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ನೋಂದಣಿಯ ಷರತ್ತುಗಳು ಕ್ರಮಬದ್ಧವಾಗಿ ಅವಲೋಕಿಸಲಾಗಿರುವುದು ಮತ್ತು ಪಾಲನೆಯಾಗಿರುವುದೆಂದು ತಾನು ಮನವರಿಕೆ ಮಾಡಿಕೊಳ್ಳಲು, ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು, ತಾನೇ ಸ್ವತಃ ಅಥವಾ ಲಿಖಿತ ದೂರಿನ ಆಧಾರದ ಮೇಲೆ ಪರಿಶೀಲನೇ ನಡೆಸಬಹುದು ಅಥವಾ 7ನೇ ಪ್ರಕರಣದ (4)ನೇ ಉಪಪ್ರಕರಣದಡಿ ರಚಿಸಲಾದ ಪರಿಶೀಲನಾ ಸಮಿತಿಗೆ, ಯುಕ್ತ ಸಮಯದೊಳಗೆ ಪರಿಶೀಲಿಸಲು ನಿರ್ದೇಶನ ನೀಡಬಹುದು.

(7) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ನೋಂದಣಿ ಷರತ್ತುಗಳ ಅನುಸಾರವಾಗಿ ಖಾಸಗಿ ವೈದ್ಯಕೀಯ ಸಂಸ್ಥೆಯು ನಡೆಯುತ್ತಿಲ್ಲವೆಂದು ಕಂಡುಬಂದ ಸಂದರ್ಭದಲ್ಲಿ, ಪ್ರಾಧಿಕಾರವು ರಾಜ್ಯ ಸರ್ಕಾರ ನಿರ್ದಿಷ್ಟಪಡಿಸಿದ ಯುಕ್ತ ಸಮಯದೊಳಗೆ ಅದನ್ನು ಪರಿಹರಿಸಲು ನಿರ್ದೇಶಿಸತಕ್ಕದ್ದು.

**8. ಪ್ರಕರಣ 19ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 19ರ (1)ನೇ ಉಪ-ಪ್ರಕರಣದಲ್ಲಿ,-

(i) “7ನೇ ಪ್ರಕರಣದಲ್ಲಿ ಮಂಜೂರು ಮಾಡಲಾಗುವ” ಎಂಬ ಅಂಕಿ ಮತ್ತು ಪದಗಳ ಬದಲಿಗೆ “5ಎ ಮತ್ತು 7ನೇ ಪ್ರಕರಣಗಳಲ್ಲಿ ಮಂಜೂರು ಮಾಡಲಾಗುವ” ಎಂಬ ಅಂಕಿಗಳು, ಅಕ್ಷರ ಮತ್ತು ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) ಹಾಗೆ ತಿದ್ದುಪಡಿ ಮಾಡಲಾದ (1)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1-ಎ) ಖಾಸಗಿ ವೈದ್ಯಕೀಯ ಸಂಸ್ಥೆಯು, ಯಾವುದೇ ಅನರ್ಹ ವೈದ್ಯಕೀಯ ಅಧಿಕಾರಿ ಅಥವಾ ಅರೆವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಿದ ಅಥವಾ ನೇಮಿಸಿದ ಸಂದರ್ಭದಲ್ಲಿ, ಅಂಥ ಖಾಸಗಿ ವೈದ್ಯಕೀಯ ಸಂಸ್ಥೆಯು ಅಪರಾಧ ನಿರ್ಣಯವಾದ ಮೇಲೆ, ಮೂರು ವರ್ಷಗಳ ಅವಧಿಗೆ ವಿಸ್ತರಿಸಬಹುದಾದ

ಕಾರವಾಸದೊಂದಿಗೆ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಹೊಣೆಗಾರನಾಗತಕ್ಕದ್ದು."

**9. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2025 (2025ರ ಕರ್ನಾಟಕ ಅಧ್ಯಾದೇಶ 7)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಡಿ ಮಾಡಲಾದ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದಲ್ಲಿ ಮಾಡಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21)ನ್ನು ಈ ಮುಂದಿನವುಗಳಿಗಾಗಿ,-

(1) "ಖಾಸಗಿ ವೈದ್ಯಕೀಯ ಸಂಸ್ಥೆ"ಯ ಪರಿಭಾಷೆಯೊಳಗೆ "ಮಾನಸಿಕ ಆರೋಗ್ಯ ಸಂಸ್ಥೆ"ಯನ್ನು ಸೇರಿಸಲು;

(2) ಭಾರತೀಯ ವೈದ್ಯಕೀಯ ಸಂಘದಿಂದ ಒಬ್ಬ ಸದಸ್ಯ ಮತ್ತು ನೋಂದಾಯಿತ ವೈದ್ಯಕೀಯ ಸಂಸ್ಥೆ ಅಥವಾ ಆಯುಷ್ ವೈದ್ಯಕೀಯ ವೃತ್ತಿನಿರತರ ಸಂಘವನ್ನು ಪ್ರತಿನಿಧಿಸುವ ಒಬ್ಬ ಸದಸ್ಯನನ್ನು ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರಕ್ಕೆ ಸದಸ್ಯನಾಗಿ ನಾಮನಿರ್ದೇಶಿಸಲು;

(3) ಕಾರ್ಯವಿಧಾನಗಳನ್ನು ಉಪಬಂಧಿಸುವುದಕ್ಕಾಗಿ,-

(i) ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರವು ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಅಥವಾ ನವೀಕರಿಸಲು;

(ii) ಅವಧಿ ಮುಕ್ತಾಯಗೊಂಡ ತಾತ್ಕಾಲಿಕವಾಗಿ ನೋಂದಾಯಿಸಿದ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲು;

(iii) ಖಾಸಗಿ ವೈದ್ಯಕೀಯ ಸಂಸ್ಥೆಗಳು ಶಾಶ್ವತ ನೋಂದಣಿ ಅಥವಾ ನವೀಕರಣಕ್ಕಾಗಿ ಅರ್ಜಿಸಲ್ಲಿಸುವುದು ಹಾಗೂ ಶಾಶ್ವತ ನೋಂದಣಿ ಅಥವಾ ನೋಂದಣಿ ನವೀಕರಣವನ್ನು ಮಂಜೂರು ಮಾಡುವುದಕ್ಕಾಗಿ ಪೂರ್ವಾಪೇಕ್ಷಿತಗಳನ್ನು (pre-requisites) ನಿಯಮಿಸುವುದು ಮತ್ತು ಅರ್ಜಿಗಳ ವಿಲೇವಾರಿಗಾಗಿ ಕಾರ್ಯವಿಧಾನವನ್ನು ನಿಯಮಿಸಲು;

(4) ಇತರೆ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲು,

- ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2025 ನ್ನು (2025ರ ಕರ್ನಾಟಕ ಅಧ್ಯಾದೇಶ 7)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

## ಪ್ರತ್ಯಾಯೋಜಿತ ಶಾಸನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 5:** | (i) ಪ್ರಕರಣ 5ಎ ಮೂಲಕ ಸೇರಿಸಲು ಉದ್ದೇಶಿಸಿರುವ,-<br>(ಎ) (1)ನೇ ಉಪ-ಪ್ರಕರಣವು, ತಾತ್ಕಾಲಿಕ ನೋಂದಣಿ ಪ್ರಮಾಣಪತ್ರದ ನಮೂನೆಯು ಒಳಗೊಂಡಿರುವಂಥ ವಿವರಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; ಮತ್ತು<br>(ಬಿ) (2)ನೇ ಉಪ-ಪ್ರಕರಣವು, ತಾತ್ಕಾಲಿಕ ನೋಂದಣಿಯ ನವೀಕರಣಕ್ಕಾಗಿ ಅಂಥ ನಮೂನೆ ಮತ್ತು ಅಂಥ ಶುಲ್ಕವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(ii) ಪ್ರಕರಣ 5ಸಿ ಮೂಲಕ ಸೇರಿಸಲು ಉದ್ದೇಶಿಸಿರುವ (1)ನೇ ಉಪ-ಪ್ರಕರಣವು ಶಾಶ್ವತ ನೋಂದಣಿ ಅಥವಾ ನೋಂದಣಿಯ ನವೀಕರಣಕ್ಕಾಗಿ ಅಂಥ ನಮೂನೆ ಮತ್ತು ಅಂಥ ಶುಲ್ಕವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 6:** | ಪ್ರಕರಣ 6ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ (vii)ನೇ ಖಂಡವು, (i) ರಿಂದ (vi)ನೇ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಂಶಗಳನ್ನು ಹೊರತುಪಡಿಸಿ, ಖಾಸಗಿ ವೈದ್ಯಕೀಯ ಸಂಸ್ಥೆಗಳ ಶಾಶ್ವತ ನೋಂದಣಿ ಅಥವಾ ನೋಂದಣಿಯ ನವೀಕರಣ ಮಂಜೂರು ಮಾಡುವುದಕ್ಕಾಗಿ ಪೂರ್ವಾಪೇಕ್ಷಿತಗಳ (pre requisites) ಅಂಶಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| **ಖಂಡ 7:** | ಪ್ರಕರಣ 7ರ ಮೂಲಕ ಪ್ರತಿಯೋಜಿಸಲು ಉದ್ದೇಶಿಸಿರುವ,-<br>(i) (1)ನೇ ಉಪ-ಪ್ರಕರಣವು, ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿ ಮಂಜೂರು ಮಾಡುವುದಕ್ಕಾಗಿನ ಷರತ್ತುಗಳನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ;<br>(ii) (3)ನೇ ಉಪ-ಪ್ರಕರಣವು, ಖಾಸಗಿ ವೈದ್ಯಕೀಯ ಸಂಸ್ಥೆಗಳು ಐದು ವರ್ಷಗಳಿಗೊಮ್ಮೆ ನೋಂದಣಿ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿ ನಮೂನೆ, ವಿಧಾನ ಮತ್ತು ಶುಲ್ಕ ಪಾವತಿಯನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ; ಮತ್ತು<br>(iii) (4)ನೇ ಉಪ-ಪ್ರಕರಣವು, ಪರಿಶೀಲನಾ ಸಮಿತಿಯಲ್ಲಿನ ಸದಸ್ಯರನ್ನು ಒಳಗೊಳ್ಳಬೇಕಾದ ವಿಧಾನವನ್ನು ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ದಿನೇಶ್ ಗುಂಡೂರಾವ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (2007ರ ಕರ್ನಾಟಕ ಅಧಿನಿಯಮ 21)ನ್ನು ಈ ಮುಂದಿನವುಗಳಿಗಾಗಿ,-

(1) "ಖಾಸಗಿ ವೈದ್ಯಕೀಯ ಸಂಸ್ಥೆ"ಯ ಪರಿಭಾಷೆಯೊಳಗೆ "ಮಾನಸಿಕ ಆರೋಗ್ಯ ಸಂಸ್ಥೆ"ಯನ್ನು ಸೇರಿಸಲು;

(2) ಭಾರತೀಯ ವೈದ್ಯಕೀಯ ಸಂಘದಿಂದ ಒಬ್ಬ ಸದಸ್ಯ ಮತ್ತು ನೋಂದಾಯಿತ ವೈದ್ಯಕೀಯ ಸಂಸ್ಥೆ ಅಥವಾ ಆಯುಷ್ ವೈದ್ಯಕೀಯ ವೃತ್ತಿನಿರತರ ಸಂಘವನ್ನು ಪ್ರತಿನಿಧಿಸುವ ಒಬ್ಬ ಸದಸ್ಯನನ್ನು ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರಕ್ಕೆ ಸದಸ್ಯನಾಗಿ ನಾಮನಿರ್ದೇಶಿಸಲು;

(3) ಕಾರ್ಯವಿಧಾನಗಳನ್ನು ಉಪಬಂಧಿಸುವುದಕ್ಕಾಗಿ,-

(i) ನೋಂದಣಿ ಮತ್ತು ಕುಂದುಕೊರತೆ ಪರಿಹಾರ ಪ್ರಾಧಿಕಾರವು ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಅಥವಾ ನವೀಕರಿಸಲು;

(ii) ಅವಧಿ ಮುಕ್ತಾಯಗೊಂಡ ತಾತ್ಕಾಲಿಕವಾಗಿ ನೋಂದಾಯಿಸಿದ ಖಾಸಗಿ ವೈದ್ಯಕೀಯ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸಲು;

(iii) ಖಾಸಗಿ ವೈದ್ಯಕೀಯ ಸಂಸ್ಥೆಗಳು ಶಾಶ್ವತ ನೋಂದಣಿ ಅಥವಾ ನವೀಕರಣಕ್ಕಾಗಿ ಅರ್ಜಿಸಲ್ಲಿಸುವುದು ಹಾಗೂ ಶಾಶ್ವತ ನೋಂದಣಿ ಅಥವಾ ನೋಂದಣಿ ನವೀಕರಣವನ್ನು ಮಂಜೂರು ಮಾಡುವುದಕ್ಕಾಗಿ ಪೂರ್ವಾಪೇಕ್ಷಿತಗಳನ್ನು (pre-requisites) ನಿಯಮಿಸುವುದು ಮತ್ತು ಅರ್ಜಿಗಳ ವಿಲೇವಾರಿಗಾಗಿ ಕಾರ್ಯವಿಧಾನವನ್ನು ನಿಯಮಿಸಲು;

(4) ಇತರೆ ಕೆಲವು ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲು,

- ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧ್ಯಾದೇಶ, 2025 ನ್ನು (2025ರ ಕರ್ನಾಟಕ ಅಧ್ಯಾದೇಶ 7)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

## ಅನುಬಂಧ
## ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007
## (2007ರ ಕರ್ನಾಟಕ ಅಧಿನಿಯಮ 21)ರ ಉದ್ಧೃತ ಭಾಗ

**XXX XXX XXX**

**2. ಪರಿಭಾಷೆಗಳು,- XXX XXX XXX**

(ಎನ್) "ಖಾಸಗಿ ವೈದ್ಯಕೀಯ ಸಂಸ್ಥೆ" ಎಂದರೆ, ಹಾಸಿಗೆಗಳುಳ್ಳ ಅಥವಾ ಹಾಸಿಗೆಗಳಿಲ್ಲದಿರುವ ಆಸ್ಪತ್ರೆ ಅಥವಾ ದವಾಖಾನೆ, ನರ್ಸಿಂಗ್ ಹೋಂ, ಚಿಕಿತ್ಸಾ ಪ್ರಯೋಗಾಲಯ, ರೋಗನಿದಾನ ಕೇಂದ್ರ, ಪ್ರಸೂತಿ ಗೃಹ, ರಕ್ತನಿಧಿ, ಕ್ಷಕಿರಣ ಪರೀಕ್ಷಾ ಕೇಂದ್ರ, ಸ್ಕ್ಯಾನಿಂಗ್ ಕೇಂದ್ರ, ಫಿಸಿಯೋಥರಪಿ ಕೇಂದ್ರ, ಚಿಕಿತ್ಸಾಲಯ, ಪಾಲಿಕ್ಲಿನಿಕ್, ಡೆಂಟಲ್ ಕ್ಲಿನಿಕ್ ಅಥವಾ ಡೆಂಟಲ್ ಪಾಲಿಕ್ಲಿನಿಕ್, ವೈದ್ಯಸಲಹಾ ಕೇಂದ್ರ (Consultation centre) ಮತ್ತು ಸಾರ್ವಜನಿಕರಿಗೆ ರೋಗ ತಪಾಸಣೆ, ರೋಗ ನಿದಾನ, ರೋಗ ತಡೆಗಟ್ಟುವಿಕೆ ಅಥವಾ ರೋಗಗುಣಪಡಿಸುವ ಅಥವಾ ಮರು ಚೇತರಿಕೆ ಸ್ಥಾಪಿಸುವ (rehabilitative) ವೈದ್ಯಕೀಯ ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸುವ ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಅಧಿಸೂಚಿಸಬಹುದಾದ, ಯಾವುದೇ ಹೆಸರಿನಿಂದ ಕರೆಯಬಹುದಾದಂಥ ಇತರ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಅಥವಾ ಖಾಸಗಿ ಸಂಸ್ಥೆಗಳನ್ನು ಒಳಗೊಳ್ಳುತ್ತದೆ ಆದರೆ,-

(i) ರಾಜ್ಯ ಸರ್ಕಾರ ಅಥವಾ ಒಂದು ಸ್ಥಳೀಯ ಪ್ರಾಧಿಕಾರ ಅಥವಾ ಇತರ ಶಾಸನಬದ್ಧ ನಿಕಾಯ;

(ii) ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸಾರ್ವಜನಿಕ ವಲಯ ಉದ್ಯಮಗಳು;

(iii) ರಾಜ್ಯ ಅಥವಾ ಕೇಂದ್ರ ಸರ್ಕಾರಗಳ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸ್ವಾಯತ್ತ ಸಂಸ್ಥೆಗಳು;

(iv) ರಾಜ್ಯ ಅಥವಾ ಕೇಂದ್ರ ಅಥವಾ ಈ ಎರಡೂ ಸರ್ಕಾರಗಳು ಶೇಕಡಾ ಐವತ್ತಕ್ಕಿಂತ ಹೆಚ್ಚಿನ ಷೇರುಗಳನ್ನು ಹೊಂದಿರುವ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿ ನೋಂದಾಯಿತವಾದ ಸಹಕಾರ ಸಂಘ;

(v) ರಾಜ್ಯ ಅಥವಾ ಕೇಂದ್ರ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 ರಡಿ ನೋಂದಣಿಯಾದ ಸಂಘ;

(vi) ರಾಜ್ಯ ಅಥವಾ ಕೇಂದ್ರ ಸರ್ಕಾರದ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರದ ಒಡೆತನದ ಅಥವಾ ಮೇಲ್ವಿಚಾರಣೆಯಲ್ಲಿರುವ ಒಂದು ನ್ಯಾಸ,

**XXX XXX XXX**

**4. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ.-** ಪ್ರತಿಯೊಂದು ಜಿಲ್ಲೆಯಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅರ್ಹತೆಯನ್ನು ಹೊಂದಿರುವ, ಈ ಮುಂದಿನ ನಾಮ ನಿರ್ದೇಶಿತ ಸದಸ್ಯರನ್ನು ಒಳಗೊಂಡ ಒಂದು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಇರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ಬಿ) | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| (ಸಿ) | ಜಿಲ್ಲಾ ಆಯುಷ್ ಅಧಿಕಾರಿ | ಸದಸ್ಯ |
| (ಡಿ) | ಭಾರತೀಯ ವೈದ್ಯಕೀಯ ಸಂಘದಿಂದ ಮತ್ತು ಇನ್ನೊಂದು ಇತರ ಸಂಘದಿಂದ, ಪ್ರತಿಯೊಂದರಿಂದಲೂ ಒಬ್ಬೊಬ್ಬ ಸದಸ್ಯರು | ಸದಸ್ಯರು |
| (ಇ) | ಪ್ರಾಧಿಕಾರವು ಕುಂದುಕೊರತೆ ನಿವಾರಣಾ ಕಾರ್ಯವನ್ನು ನಿರ್ವಹಿಸುವಾಗ ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು |

**XXX XXX XXX**

**5. ನೋಂದಣಿಗಾಗಿ ಅರ್ಜಿ.-** (1) ಖಾಸಗಿ ವೈದ್ಯಕೀಯ ಸಂಸ್ಥೆಗಳನ್ನು ಸ್ಥಾಪಿಸಲು, ನಡೆಸಲು, ನಿರ್ವಹಿಸಲು ಅಥವಾ ನಡೆಸುವುದನ್ನು ಮತ್ತು ನಿರ್ವಹಿಸುವುದನ್ನು ಮುಂದುವರೆಸಲು ಬಯಸುವ

ಪ್ರತಿಯೊಬ್ಬ ವ್ಯಕ್ತಿಯು ಸಂಬಂಧಿಸಿದ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ನಮೂನೆಯಲ್ಲಿ, ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದೊಡನೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಬೇರೆ ಬೇರೆ ಖಾಸಗಿ ವೈದ್ಯಕೀಯ ಸಂಸ್ಥೆಗಳ ವರ್ಗ ಅಥವಾ ವರ್ಗಗಳಿಗೆ ಬೇರೆ ಬೇರೆ ಶುಲ್ಕವನ್ನು ನಿಯಮಿಸಬಹುದು.

XXX XXX XXX

**6. ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಪೂರ್ವ ಅಗತ್ಯತೆಗಳು.-** ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೋಂದಣಿಯನ್ನು ಮಂಜೂರುಮಾಡುವ ಖಾಸಗಿ ವೈದ್ಯಕೀಯ ಸಂಸ್ಥೆಗಳ ನೋಂದಣಿಗಾಗಿ ಇರುವ ಈ ಮುಂದಿನ ಪೂರ್ವ ಅಗತ್ಯತೆಗಳನ್ನು ಪೂರೈಸಲಾಗಿದೆಯೇ ಎಂಬುದನ್ನು ಪರಿಗಣಿಸತಕ್ಕದ್ದು, ಎಂದರೆ:-

(i) ಖಾಸಗಿ ವೈದ್ಯಕೀಯ ಸಂಸ್ಥೆಯು ಆರೋಗ್ಯಕರ ಪರಿಸರದಲ್ಲಿ ಇದೆ ಮತ್ತು ಅದು ಸ್ಥಾಪನೆಯಾದ ಅಥವಾ ಸ್ಥಾಪನೆಯಾಗಬೇಕಾದ ಉದ್ದೇಶಕ್ಕೆ ಸೂಕ್ತವಾಗಿದೆ;

(ii) ಖಾಸಗಿ ವೈದ್ಯಕೀಯ ಸಂಸ್ಥೆಯು ವಿದ್ಯಾರ್ಹತೆಯುಳ್ಳ ವೈದ್ಯರನ್ನು, ವಿದ್ಯಾರ್ಹತೆಯುಳ್ಳ ಮತ್ತು ತರಬೇತಿ ಹೊಂದಿದ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಹೊಂದಿದೆ;

(iii) ಖಾಸಗಿ ವೈದ್ಯಕೀಯ ಸಂಸ್ಥೆಯು ತನ್ನ ವಿವಿಧ ಪ್ರಕಾರ್ಯಗಳನ್ನು ನಡೆಸಲು, ಸಾಧನೆ ಸಲಕರಣೆಗಳು ಹಾಗೂ ಇತರ ಮೂಲ ಸೌಕರ್ಯಗಳಿಗಾಗಿ ಅವಶ್ಯಕವಾದ ಕಟ್ಟಡಗಳನ್ನು ಹೊಂದಿದೆ;

(iv) ಖಾಸಗಿ ವೈದ್ಯಕೀಯ ಸಂಸ್ಥೆಯು 9ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಮಾನಕ ಗುಣಮಟ್ಟಗಳಿಗೆ ಅನುಗುಣವಾಗಿದೆ;

(v) ನಿಯಮಿಸಬಹುದಾದ ಅಂಥ ಇತರ ಅಂಶಗಳು.

ಪರಂತು, ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017ರ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ, ಸರ್ಕಾರಿ ಆಸ್ಪತ್ರೆಯಿಂದ ಅಥವಾ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ನಿಕಾಯಗಳು ಒಡೆತನ ಹೊಂದಿರುವ ಅಥವಾ ನಿಯಂತ್ರಣ ಹೊಂದಿರುವ ಸೊಸೈಟಿ ಅಥವಾ ನ್ಯಾಸ ಅಥವಾ ಸ್ವಾಯತ್ತ ಸಂಸ್ಥೆಯಿಂದ ಪ್ರವರ್ತಿಸಲಾದ ಅಥವಾ ನಿರ್ವಹಿಸಲಾದ ಆಸ್ಪತ್ರೆಯಿಂದ 200 ಮೀಟರುಗಳ ದೂರದ ಒಳಗೆ ಯಾವುದೇ ಹೊಸ ಖಾಸಗಿ ಚಿಕಿತ್ಸಾ ಪ್ರಯೋಗಾಲಯಕ್ಕೆ ಅನುಮತಿಯನ್ನು ನೀಡತಕ್ಕದ್ದಲ್ಲ.

XXX XXX XXX

**7. ಅರ್ಜಿಗಳ ವಿಲೆ.-** (1) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 5ನೇ ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಎಲ್ಲಾ ರೀತಿಯಲ್ಲಿಯೂ ಪರಿಪೂರ್ಣವಾದ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ, 6ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಅವಶ್ಯಕವಾಗಬಹುದಾದ ಅಂಥ ವಿಚಾರಣೆಯನ್ನು ಪರಿಶೀಲನಾ ಸಮಿತಿಯ ಮೂಲಕ ನಡೆಸಿದ ತರುವಾಯ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ನೋಂದಣಿಯನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ತೊಂಭತ್ತು ದಿನಗಳಿಗೂ ಮೀರಿದ ಯಾವುದೇ ವಿಳಂಬದ ಸಂದರ್ಭದಲ್ಲಿ ನೋಂದಣಿಯನ್ನು ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವನ್ನು ಕೂಡಲೇ ಅರ್ಜಿದಾರನಿಗೆ ತಿಳಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಿದ ಪ್ರತಿಯೊಂದು ನೋಂದಣಿಯು ಐದು ವರ್ಷಗಳ ಅವಧಿಯ ವರೆಗೆ ಸಿಂಧುತ್ವವನ್ನು ಹೊಂದಿರುತ್ತದೆ ಮತ್ತು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯಿಸಿ ಅರ್ಜಿ ಸಲ್ಲಿಸಿದ ಮೇಲೆ ಒಂದು ಬಾರಿಗೆ ಐದು ವರ್ಷಗಳ ವರೆಗೆ ನವೀಕರಿಸಬಹುದು.

(4) (1)ನೇ ಉಪಪ್ರಕರಣದ ಉದ್ದೇಶಕ್ಕಾಗಿ, ನೋಂದಣಿ ಮತ್ತು ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರವು, ನಿಯಮಿಸಬಹುದಾದ ಅಂಥ ಸದಸ್ಯರನ್ನು ಒಳಗೊಂಡ ಒಂದು ಪರಿಶೀಲನಾ ಸಮಿತಿಯನ್ನು ರಚಿಸಬಹುದು.

(5) ನೋಂದಣಿಯ ನವೀಕರಣಕ್ಕಾಗಿ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಎಲ್ಲಾ ರೀತಿಯಲ್ಲೂ ಪರಿಪೂರ್ಣ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಭತ್ತು ದಿನಗಳೊಳಗೆ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 6ನೇ ಪ್ರಕರಣದ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು (4)ನೇ ಉಪಪ್ರಕರಣದ ಅಡಿಯಲ್ಲಿ ರಚನೆಯಾದ ಪರಿಶೀಲನಾ ಸಮಿತಿಯ ಮೂಲಕ, ಅವಶ್ಯಕವಾಗಬಹುದಾದ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ನಿಯಮಿಸಬಹುದಾದ ಅಂಥ ಷರತ್ತುಗಳಿಗೆ ಒಳಪಟ್ಟು ನವೀಕರಣವನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು; ತೊಂಭತ್ತು ದಿನಗಳಿಗೂ ಮೀರಿದ ಯಾವುದೇ ವಿಳಂಬದ ಸಂದರ್ಭದಲ್ಲಿ ನವೀಕರಣವನ್ನು ಮಂಜೂರು ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

(6) ನೋಂದಣಿ ಮತ್ತು ಕುಂದುಕೊರತೆಗಳ ನಿವಾರಣಾ ಪ್ರಾಧಿಕಾರವು, ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡದ ಹೊರತು ಮತ್ತು ಅಂಥ ತಿರಸ್ಕರಣೆಗೆ ಕಾರಣಗಳನ್ನು ದಾಖಲಿಸದ ಹೊರತು, ನೋಂದಣಿ ಅಥವಾ ನವೀಕರಣದ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

(7) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ತಾನಾಗಿಯೇ ಆಗಲಿ ಅಥವಾ ಯಾವುದೇ ಲಿಖಿತ ದೂರಿನ ಆಧಾರದ ಮೇಲೆಯಾಗಲಿ, ನೋಂದಣಿಯ ಷರತ್ತುಗಳನ್ನು ಮುಕ್ತವಾಗಿ ಪಾಲಿಸಲಾಗಿದೆಯೇ ಮತ್ತು ಅನುಸರಿಸಲಾಗಿದೆಯೇ ಎಂಬುದನ್ನು ತಾನು ಮನದಟ್ಟು ಮಾಡಿಕೊಳ್ಳಲು ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸೂಕ್ತ ಸಮಯದಲ್ಲಿ ತಪಾಸಣೆ ನಡೆಸುವಂತೆ ಮಾಡಬಹುದು ಅಥವಾ (4)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ಪರಿಶೀಲನಾ ಸಮಿತಿಯು ತಪಾಸಣೆ ನಡೆಸಲು ನಿರ್ದೇಶಿಸಬಹುದು.

(8) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ, ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿಯ ಷರತ್ತುಗಳ ಅನುಸಾರವಾಗಿ ನಡೆಸಲಾಗುತ್ತಿಲ್ಲ ಎಂದು ಕಂಡುಬAದ ಸಂದರ್ಭದಲ್ಲಿ, ಅದನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಸೂಕ್ತ ಸಮಯದೊಳಗೆ ಪರಿಹರಿಸುವಂತೆ ಸಂಸ್ಥೆಗೆ ಪ್ರಾಧಿಕಾರವು ನಿರ್ದೇಶಿಸತಕ್ಕದ್ದು.

**XXX** **XXX** **XXX**

**19. ದಂಡನೆಗಳು.-** (1) ಯಾವೊಬ್ಬ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾಗುವ ನೋಂದಣಿ ಇಲ್ಲದ ಒಂದು ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ, ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ, ಅವನು, ಅಪರಾಧ ನಿರ್ಣಯವಾದ ನಂತರ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಒಂದು ಲಕ್ಷ ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಒಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಣಿತ ಅಪರಾಧಿಯಾಗಿದ್ದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು, ಅಂಥ ನೋಂದಣಿಯು ರದ್ದು ಅಥವಾ ಅಮಾನತುಗೊಂಡಿದ್ದು ಅಂಥ ರದ್ದತಿ ಅಥವಾ ಅಮಾನತಿನ ವಿರುದ್ಧ ದಾಖಲಿಸಲಾದ ಅಪೀಲು ಇತ್ಯರ್ಥದಲ್ಲಿದ್ದ ಹೊರತು ಅದನ್ನು ಕೂಡಲೇ ಮುಚ್ಚುವಂತೆ ಆದೇಶಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು ನಿರ್ದೇಶನದಲ್ಲಿ ತಿಳಿಸಿರತಕ್ಕದ್ದು ಮತ್ತು ಅದು, ಅಂಥ ವರ್ಗಾವಣೆ ಮಾಡುವವರೆಗೂ ಒಳರೋಗಿಗಳ ಸುರಕ್ಷತೆ ಮತ್ತು ಅಭಿರಕ್ಷೆಗೆ ಸಂಬಂಧಪಟ್ಟ ಇತರೆ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

(4) ಯಾವೊಬ್ಬ ವ್ಯಕ್ತಿಯು, ನೋಂದಣಿಯ ಷರತ್ತುಗಳನ್ನು ಉಲ್ಲಂಘಿಸಿ ಅಥವಾ 12 ಅಥವಾ 13ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಒಂದು ವೈದ್ಯಕೀಯ ಸಂಸ್ಥೆಯನ್ನು ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ನಿರ್ದೇಶನಗಳನ್ನು ಪಾಲಿಸಲು ವಿಫಲನಾದಲ್ಲಿ, ಅವನು, ಅಪರಾಧ ನಿರ್ಣಿತನಾದ ತರುವಾಯ, ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು ಮತ್ತು ಎರಡನೇ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ, ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(5) ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮದ ಯಾವುದೇ ಇತರೆ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅವನು, ಅಪರಾಧ ನಿರ್ಣಯವಾದ ನಂತರ, ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಸುಳ್ಳು, ಕ್ಷುಲ್ಲಕ ಅಥವಾ ಕಿರುಕುಳಕಾರಿಯಾದ ಯಾವುದೇ ಫಿರ್ಯಾದನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡುವ ಯಾವೊಬ್ಬ ವ್ಯಕ್ತಿಯು, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮೂಲಕ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX** **XXX** **XXX**

**21. ಪ್ರವೇಶ, ಪರಿಶೀಲನೆ ಇತ್ಯಾದಿಗಳ ಅಧಿಕಾರ.-** (1) ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ರಾಜ್ಯಸರ್ಕಾರವು, ರಾಜ್ಯಸರ್ಕಾರದ ಯಾವೊಬ್ಬ ಅಧಿಕಾರಿಯನ್ನು ವಿಶೇಷವಾಗಿ ಈ ಮುಂದಿನವುಗಳಿಗಾಗಿ ಪ್ರಾಧಿಕೃತಗೊಳಿಸಬಹುದು (ಇನ್ನು ಮುಂದೆ ಈ ಪ್ರಕರಣದಲ್ಲಿ ಮತ್ತು 22ನೇ ಪ್ರಕರಣದಲ್ಲಿ ಪ್ರಾಧಿಕೃತ ಅಧಿಕಾರಿ ಎಂದು ಉಲ್ಲೇಖಿಸಲಾಗಿದೆ),-

(ಎ) ಎಲ್ಲಾ ಸಮಂಜಸ ಸಮಯದಲ್ಲೂ ಮತ್ತು ಅವನು ಯುಕ್ತವೆಂದು ಯೋಚಿಸಬಹುದಾದಂತೆ ರಾಜ್ಯಸರ್ಕಾರಿ ಸೇವೆಯಲ್ಲಿರುವ ವ್ಯಕ್ತಿಗಳಾದಂಥ ಸಹಾಯಕರ ನೆರವು ಯಾವುದಾದರೂ ಇದ್ದಲ್ಲಿ ಅದರೊಂದಿಗೆ, ಖಾಸಗಿ ವೈದ್ಯಕೀಯ ಸಂಸ್ಥೆ ಎಂದು ಬಳಸಲಾಗುವ ಅಥವಾ ಬಳಸಲಾಗುತ್ತಿದೆ ಎಂಬ ನಂಬಿಕೆಗೆ ಕಾರಣವಾದ ಯಾವುದೇ ಸ್ಥಳವನ್ನು ಪ್ರವೇಶಿಸುವುದು ಮತ್ತು ಪರಿಶೀಲಿಸುವುದು;

(ಬಿ) ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಮತ್ತು ಅದರಲ್ಲಿ ಕಂಡುಬರುವ ಯಾವುದೇ ರಿಜಿಸ್ಟರು, ದಾಖಲೆ, ಸಾಧನ ಸಲಕರಣೆ ವಸ್ತುಗಳು ಅಥವಾ ದಸ್ತಾವೇಜುಗಳನ್ನು ಪರಿಶೀಲಿಸುವುದು ಮತ್ತು ಪರಿಶೀಲನೆಯ ವಿಶ್ಲೇಷಣೆ ಅಥವಾ ತನಿಖೆಯ ಉದ್ದೇಶಕ್ಕಾಗಿ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಯಾವುದೇ ದಸ್ತಾವೇಜು ಅಥವಾ ದಾಖಲೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಮತ್ತು ಅಂಥ ಉದ್ದೇಶಕ್ಕಾಗಿ ತನಗೆ ಅಗತ್ಯವೆಂದು ಭಾವಿಸಬಹುದಾದಷ್ಟು ಅವಧಿಯವರೆಗೆ ಅವುಗಳನ್ನು ತನ್ನಲ್ಲಿ ಉಳಿಸಿಕೊಳ್ಳುವುದು, ಪರಂತು, ಪ್ರಾಧಿಕೃತ ಅಧಿಕಾರಿಯು, ದಸ್ತಾವೇಜುಗಳು ಮತ್ತು ದಾಖಲೆಗಳನ್ನು ಮುಟ್ಟುಗೋಲು ಹಾಕಿಕೊಂಡ ತರುವಾಯ ಕಾರ್ಯ ಸಾಧ್ಯವಾದಷ್ಟು ಬೇಗನೇ ಖಾಸಗಿ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕನಿಗೆ ಅಂಥ ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಸೂಕ್ತ ಕಾರಣಗಳನ್ನು ತಿಳಿಸತಕ್ಕದ್ದು.

(ಸಿ) ಅಂಥ ವಿಚಾರಣೆಯನ್ನು ನಡೆಸುವುದು ಮತ್ತು ಸ್ಥಳದಲ್ಲೇ ತೀರ್ಮಾನ ಕೈಗೊಳ್ಳಬಹುದು ಅಥವಾ ಅನ್ಯಥ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಯಾವೊಬ್ಬ ವ್ಯಕ್ತಿಯ ಹೇಳಿಕೆಯನ್ನು ತೆಗೆದುಕೊಳ್ಳುವುದು.

(ಡಿ) ಈ ಅಧಿನಿಯಮದ ಉದ್ದೇಶಗಳನ್ನು ಕೈಗೊಳ್ಳುವುದಕ್ಕಾಗಿ, ಅವಶ್ಯಕವೆಂದು ಭಾವಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು:

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ತನ್ನನ್ನು ಸ್ವತಃ ಅಪರಾಧಿ ಎಂದು ಸಿಕ್ಕಿಸುವ ಪ್ರವೃತ್ತಿಯುಳ್ಳ ಯಾವುದೇ ಸಾಕ್ಷ್ಯಯವನ್ನು ನೀಡುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ವಸತಿ ಸ್ಥಳವನ್ನು (ಖಾಸಗಿ ವೈದ್ಯಕೀಯ ಸಂಸ್ಥೆ-ಹಾಗೂ-ವಸತಿಗೃಹವಲ್ಲದ್ದು) ಮತ್ತು ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನು ನೀಡಿದ ಶೋಧನಾ

ವಾರೆಂಟನ್ನು ಪ್ರಾಧಿಕಾರಿಯು ಹೊಂದಿದ್ದ ಹೊರತು, ಪ್ರಾಧಿಕೃತ ಅಧಿಕಾರಿಯು ಪ್ರವೇಶಿಸತಕ್ಕದ್ದಲ್ಲ ಮತ್ತು ಪರಿಶೋಧಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿಯ ಎಲ್ಲ ಶೋಧನೆಗಳು ಮತ್ತು ಮುಟ್ಟುಗೋಲುಗಳನ್ನು ಸಾಧ್ಯವಾದಷ್ಟು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

(2) ಪ್ರಾಧಿಕೃತ ಅಧಿಕಾರಿಯು (1)ನೇ ಉಪಪ್ರಕರಣದ ಅಡಿಯಲ್ಲಿ ತಾನು ಮಾಡಿದ ತಪಾಸಣೆ, ಶೋಧನೆ ಮತ್ತು ಮುಟ್ಟುಗೋಲಿನ ಫಲಿತಾಂಶಗಳಿಗೆ ಸಂಬಂಧಿಸಿದಂತೆ ನೋಂದಣಿ ಪ್ರಾಧಿಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರಿಯು ಈ ಅಧಿನಿಯಮದ ಅಡಿಯಲ್ಲಿ ಸದರಿ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

**XXX** **XXX** **XXX**

# THE KARNATAKA PRIVATE MEDICAL ESTABLISHMENTS (AMENDMENT) BILL, 2025

## (LA Bill No. 87 of 2025)

A Bill further to amend the Karnataka Private Medical Establishments Act, 2007.

Whereas it is expedient further to amend the Karnataka Private Medical Establishments Act, 2007 (Karnataka Act 21 of 2007) for the purposes hereinafter appearing;

Be it enacted by the Karnataka State Legislature in the seventy sixth year of the Republic of India, as follows:-

**1. Short title and commencement.-** (1) This Act may be called the Karnataka Private Medical Establishments (Amendment) Act, 2025.

(2) It shall be deemed to have come into force with effect from 29th day of September 2025.

**2. Amendment of section 2.-** In the Karnataka Private Medical Establishments Act, 2007 (Karnataka Act 21 of 2007) (hereinafter referred to as the Principal Act), in section 2, in clause (n), after the word " dispensary" the words "or mental health establishment" shall be inserted.

**3. Amendment of section 4.-** In the principal Act, in section 4, in the table for item (d) and the entries relating thereto, the following shall be substituted, namely:-

"(d) one member from Indian Medical Association and one member representing Association of registered medical establishment or Ayush Medical Practitioners- Members."

**4. Amendment of section 5.-** In the Principal Act, in section 5,-

(i) for the heading "Application for Registration" the heading "Application for provisional Registration and Renewal of Registration" shall be substituted; and

(ii) after the words "Redressal Authority" the words "for a provisional registration and renewal of registration " shall be inserted.

**5. Insertion of new sections 5A, 5B and 5C.-** In the Principal Act, after section 5, the following shall be inserted, namely:-

**"5A. Grant or renewal of provisional registration.-** (1) On receipt of applications the registration and grievance redressal authority shall within period of ten days grant to the applicant a provisional registration certificate in such Form, containing such particulars, as may be prescribed without any inquiry. The provisional certificate of registration shall be valid for six months subject to renewal thereafter.

(2) An application for renewal of provisional registration may be made to the registration and grievance redressal authority in such form along with such fees as may be prescribed.

(3) On receipt of application for renewal of provisional registration the registration and grievance redressal authority, in respect of which standards have been notified or specified by the Government, shall not renew provisional registration beyond, the period of one year from the date of notification of standards or from the date of commencement of the Karnataka Private Medical Establishments (Amendment) Act, 2025 whichever is later.

**5B. Publication of list of expired registration of provisionally registered private medical establishments.-**The registration and grievance redressal authority shall publish the list of expired Private Medical Establishments which were provisionally registered.

**5C. Application for Permanent registration or renewal .-**(1) Every Private medical establishment willing to have permanent registration or renewal of registration shall make an application to the registration and grievance redressal Authority along with valid provisional registration, in such Form along with such fees as may be prescribed subject to fulfilment of pre requisites and standards specified in section 6.

(2) All registered Private medical establishments existing on the date of commencement of the Karnataka Private Medical Establishments (Amendment) Act, 2025 shall be deemed to be provisionally registered establishment and their registration shall be valid for a period till the expiry of its validity.

(3) Application for renewal of registration shall be made ninety days before the expiry of the validity of the certificate."

**6. Substitution of section 6.-** In the Principal Act, for section 6, the following shall be substituted, namely:-

**"6. Pre-requisites for Permanent Registration or Renewal of Private Medical Establishments.-** The Registration and Grievance Redressal Authority shall before granting the permanent registration or renewal consider whether the following prerequisites for registration of a Private Medical Establishment are satisfied that,-

(i) its premises is located in hygienic surroundings and otherwise suitable for the purpose for which it is established or sought to be established;

(ii) it is adequately staffed with qualified doctors, qualified and trained para medical personnel;

(iii) it has the necessary buildings with adequate space for performing its various functions, equipments and other infrastructure facilities;

(iv) it confirms to the standards referred to in section 9;

(v) it has valid provisional registration certificate;

(vi) it has registered on the e-DAR portal, for furnishing Data and medical reports of patients in the event of a reported Road Accident; and

(vii) such other factors as may be prescribed:

Provided that, no new Private Clinical Laboratory shall be permitted within a radius of 200 meters from the Government Hospital or from the Hospital promoted or managed by a society or trust or autonomous organization owned or controlled by the State Government or Central Government or Local Bodies with effect from the date of commencement of the Karnataka Private Medical Establishments (Amendment) Act, 2017."

**7. Substitution of section 7.-** In the Principal Act, for section 7, the following shall be substituted, namely:-

**"7.Disposal of applications.-** (1) On receipt of an application under section 5-C, the Registration and Grievance Redressal Authority may having regard to the provisions of sections 6 and 9 and after such enquiry as may be necessary, by an Inspection Committee, having satisfied that the Private medical establishment fulfils the conditions required, either grant registration within ninety days subject to the conditions as may be prescribed or reject the application within ninety days from the date of receipt of the application in all respects:

Provided that, in case the Private medical establishment ready to under go third party inspection by the Quality Council of India (QCI) for having fulfilled the conditions specified in sections 6 and 9 and brings certificate to that effect the registration and grievance redressal authority shall sanction registration or renewal within ten days from the date of receipt of the application, without any inspection as specified in sub-section (1).

Provided further that, in case the Private medical establishment brings accreditation certificate for having fulfilled the conditions specified in sections 6 and 9 from any of the three accreditation agencies viz., National Quality Assurance Standards (NQAS), National Accreditation Board For Hospital and Health Care Provides (NABH) or Quality and Accreditation Institute (QAI), then the registration and grievance redressal authority shall sanction registration or renewal within ten days from the date of the application, without any inspection as specified in sub-section (1).

(2) Every order passed under sub-section (1) shall be communicated to the applicant forthwith.

(3) Every registration or renewal granted under sub-section (1) shall be valid for a period of five years and may be renewed once in five years on an application made in such Form, in such manner and on payment of such fees, as may be prescribed.

(4) For the purpose of sub-section (1), the Registration and Grievance Redressal Authority may constitute the Inspection Committee consisting of such members as may be prescribed.

(5) The Registration and Grievance Redressal Authority shall not reject the application for registration or renewal without giving an opportunity of being heard to the applicant and without recording the reasons for such rejection.

(6) The Registration and Grievance Redressal Authority, on its own or based on any written complaint, may cause inspection or direct the Inspection Committee constituted under sub-section (4) of section 7 to inspect, at a reasonable time, any private medical

establishment, to satisfy itself that the conditions of registration are being duly observed and complied with.

(7) In case the Registration and Grievance Redressal Authority finds that the private medical establishment is not being run in accordance with the conditions of registration, the Authority shall direct the establishment to remedy the same within the reasonable time specified by the State Government."

**8. Amendment of section 19.-** In the principal Act, in section 19, in sub-section (1),-

(i) for the words and figure "granted under section 7" the words, letter and figures "granted under sections 5A and 7" shall be substituted; and

(ii) after sub-section (1) as so amended, the following shall be inserted, namely:-

"(1-A) In case a private medical establishment employs or appoints any unqualified medical officer or paramedical staff such private medical establishment shall on conviction be liable for an imprisonment for a term which may extend to three years and with a fine which may extend to one lakh rupees."

**9. Repeal and savings.-** (1) The Karnataka Private Medical Establishments (Amendment) Ordinance, 2025 (Karnataka Ordinance 07 of 2025) is hereby repealed.

(2) Notwithstanding such repeal anything done or any action taken under principal Act as amended by the said Ordinance shall be deemed to have been done or taken under the principal Act as amended by this Act.

## STATEMENT OF OBJECTS AND REASONS

It is considered necessary further to amend the Karnataka State Private Medical Establishments Act, 2007 (Karnataka Act 21 of 2007) to,-

(1) include the "Mental Health establishment" within the definition of "Private medical establishment";

(2) nominate one member from the Indian Medical Association and one member representing Association of Registered Medical Establishments or Ayush Medical Practitioners as member of Registration and Grievances Redressal Authority.

(3) provide procedure for,-

(i) grant or renewal of provisional registration Certificate by the registration and grievance redressal authority;

(ii) publication of list of expired registration of provisionally registered Private Medical establishments;

(iii) application for permanent registration or renewal of registration, to prescribe pre-requisites for grant of permanent registration or renewal by the Private Medical Establishments and to prescribe procedure for disposal of applications;

(4) certain other consequential amendments are also made.

As the matter was urgent and both Houses of the State Legislature were not in session, the Karnataka Private Medical Establishments (Amendment) Ordinance, 2025 (Karnataka Ordinance 07 of 2025) was promulgated to achieve the above object.

This Bill seeks to replace the said Ordinance.

Hence, the Bill.

## FINANCIAL MEMORANDUM

There is no financial implication involved in the proposed Legislative measure.

## MEMORANDUM REGARDING DELEGATED LEGISLATION

| | |
|---|---|
| Clause 5: | (i) section 5A proposed to be inserted,-<br>(a) sub-section (1) empowers the State Government to prescribe such Form containing such particulars of provisional registration certificate; and<br>(b) sub-section (2) empowers the State Government to prescribe such section Form and such fees for renewal of provisional registration.<br>(ii) sub-section (1) of section 5C proposed to be inserted, sub-section (1), empowers the State Government to prescribe such Form and such fees for permanent registration or renewal of registration. |
| Clause 6: | section 6 proposed to be substituted clause (vii), empowers the State Government to prescribe the factors of Pre-requisites for granting Permanent Registration or renewal of Registration of Private Medical Establishments other than factors specified in clauses (i) to (vi). |
| Clause 7: | section 7 proposed to be substituted,-<br>(i) sub-section (1) empowers the State Government to prescribe the conditions for grant registration for Private Medical Establishments ;<br>(ii) sub-section (3) empowers the State Government to prescribe the application Form, manner and payment of fee for renewal of registration once in five years by the Private Medical establishment; and<br>(iii) sub-section (4) empowers the State Government to prescribe the manner for consisting of members in the Inspection committee. |

The proposed delegation of legislative power is normal in character.

**DINESH GUNDU RAO**
Minister of Health and
Family Welfare Department

**M.K. VISHALAKSHI**
Secretary
Karnataka Legislative Assembly

**EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.**

It is considered necessary further to amend the Karnataka State Private Medical Establishments Act, 2007 (Karnataka Act 21 of 2007) to,-

(1) include the "Mental Health establishment" within the definition of "Private medical establishment";

(2) nominate one member from the Indian Medical Association and one member representing Association of Registered Medical Establishments or Ayush Medical Practitioners as member of Registration and Grievances Redressal Authority.

(3) provide procedure for,-

(iv) grant or renewal of provisional registration Certificate by the registration and grievance redressal authority;

(v) publication of list of expired registration of provisionally registered Private Medical establishments;

(vi) application for permanent registration or renewal of registration, to prescribe pre-requisites for grant of permanent registration or renewal by the Private Medical Establishments and to prescribe procedure for disposal of applications;

(4) certain other consequential amendments are also made.

As the matter was urgent and both Houses of the State Legislature were not in session, the Karnataka Private Medical Establishments (Amendment) Ordinance, 2025 (Karnataka Ordinance 07 of 2025) was promulgated to achieve the above object.

This Bill seeks to replace the said Ordinance.

## ANNEXURE

## THE EXTRACT OF THE KARNATAKA PRIVATE MEDICAL ESTABLISHMENTS ACT, 2007 (KARNATAKA ACT 21 OF 2007)

**XXX XXX XXX**

**2. Definitions.- XXX XXX XXX**

(n) "Private Medical Establishment" means a hospital or dispensary with beds or without beds, a Nursing Home, Clinical Laboratory, Diagnostic Centre, Maternity Home, Blood Bank, Radiological Centre, Scanning Centre, Physiotherapy Centre, Clinic, Polyclinic, Dental Clinic or Dental Polyclinic Consultation Centre and such other establishments by whatever name called where investigation, diagnosis and preventive or curative or rehabilitative medical treatment facilities are provided to the public and includes Voluntary or Private Establishments as may be notified by the State Government by notification but does not include Medical Establishments run or maintained or sponsored by,-

(i) the State Government or a Local Authority or other Statutory body;

(ii) the Public Sector undertakings owned or controlled by the State or Central Government;

(iii) autonomous institutions owned or controlled by the State or Central Government;

(iv) a Co-operative Society registered under the Karnataka Co-operative Societies Act, 1959 in which more than fifty per cent of shares are held by the State or Central Government or both;

(v) a Society registered under the Karnataka Societies Registration Act, 1960 and which is owned or controlled by the State or Central Government;

(vi) a trust owned or managed by the State or Central Government or any Local Authority.

**XXX XXX XXX**

**4. Registration and Grievance Redressal Authority.-** There shall be a Registration and Grievance Redressal Authority in each district consisting of the following members nominated in such manner with such qualification as may be prescribed, namely:-

| | | |
|---|---|---|
| (a) | The Deputy Commissioner of the District | Chairman |
| (b) | District Health and Family Welfare Officer | Member Secretary |
| (c) | District AYUSH Officer | Member |
| (d) | One member each from Indian Medical Association and one more association | Members |
| (e) | One woman representative when the Authority is dealing with a grievance redressal. | Member |

**XXX XXX XXX**

**5. Application for Registration.-** (1) Every person desiring to establish, run, maintain or continue to run and maintain a Private Medical Establishment shall make an application to the concerned Registration and Grievance Redressal Authority in such form, in such manner and along with such fees as may be

prescribed and different amount of fees may be prescribed, for different class or classes of Private Medical Establishments.

**XXX** **XXX** **XXX**

**6. Pre-requisites for Registration of Private Medical Establishments.-** The Registration and Grievance Redressal Authority shall before granting the registration consider whether the following prerequisites for registration of a Private Medical Establishment are satisfied, namely:-

(i) that the premises housing the Private Medical Establishment is located in hygienic surroundings and otherwise suitable for the purpose for which it is established or sought to be established;

(ii) that the Private Medical Establishment is adequately staffed with qualified doctors, qualified and trained para medical personnel;

(iii) that the Private Medical Establishment has the necessary buildings with adequate space for performing its various functions, equipments and other infrastructure facilities;

(iv) that the Private Medical Establishment conforms to the standards referred to in section 9;

(v) such other factors as may be prescribed.

Provided that no new Private Clinical Laboratory shall be permitted within a radius of 200 meters from the Government Hospital or from the Hospital promoted or managed by a society or trust or autonomous organization owned or controlled by the State Government or Central Government or Local Bodies with effect from the date of commencement of the Karnataka Private Medical Establishments (Amendment) Act, 2017.

**XXX** **XXX** **XXX**

**7. Disposal of applications.-** (1) On receipt of an application under section 5 the Registration and Grievance Redressal Authority may having regard to the provisions of section 6 and after such enquiry as may be necessary, by an Inspection Committee, either grant registration subject to the conditions as may be prescribed or reject the application within ninety days from the date of receipt of the complete application in all respects:

Provided further that in case of any delay beyond ninety days the registration shall be deemed to have been granted.

(2) Every order passed under sub-section (1) shall be communicated to the applicant forthwith.

(3) Every registration granted under sub-section (1) shall be valid for a period of five years and may be renewed once in five years on an application made in such form, in such manner and on payment of such fees, as may be prescribed.

(4) For purpose of sub-section (1), the Registration and Grievance Redressal Authority may constitute the Inspection Committee consisting of such members as may be prescribed.

(5) On receipt of application for renewal of registration, the Registration and Grievance Redressal Authority may having regard to the provisions of section 6 and after such enquiry as may be necessary by the Inspection Committee constituted under sub-section (4) either grant renewal subject to the condition as may be prescribed or reject the application within ninety days from the date of receipt of the complete application in all respect; in case of any delay beyond ninety days the renewal shall be deemed to have been granted.

(6) The Registration and Grievance Redressal Authority shall not reject the application for registration or renewal without giving an opportunity of being heard to the applicant and without recording the reasons for such rejection.

(7) The Registration and Grievance Redressal Authority, on its own or based on any written complaint, may cause inspection or direct the Inspection Committee constituted under sub-section (4) to inspect, at a reasonable time, any private medical establishment, to satisfy itself that the conditions of registration are being duly observed and complied with.

(8) In case the Registration and Grievance Redressal Authority finds that the private medical establishment is not being run in accordance with the conditions of registration, the Authority shall direct the establishment to remedy the same within the reasonable time as may be specified in the order.

**XXX XXX XXX**

**19. Penalties.-** (1) Where any person establishes, runs or maintains a Private Medical Establishment without registration granted under section 7 he shall, on conviction, be punished with imprisonment for a term which may extend to three years and with fine which may extend upto one lakh rupees.

(2) When a person is convicted under sub-section (1), the Registration and Grievance Redressal Authority shall direct immediate closure of the unregistered Private Medical Establishment, except where a registration is cancelled or suspended and an appeal filed against such cancellation or suspension is pending.

(3) Every order made under sub-section (1) shall contain a direction that the inpatients of such unregistered Private Medical Establishment shall be transferred to such other Private Medical Establishment as may be specified in that order and it shall also contain such other provisions as to the care and custody of such inpatients pending such transfer.

(4) Where any person runs or maintains a Private Medical Establishment in contravention of the conditions of registration or contravenes the provisions of section 12 or 13, or fails to comply with the direction issued under sub-section (2). he shall, on conviction, be punished with a fine which may extend to twenty five thousand rupees and in the case of a second or subsequent offence with a fine which may extend to fifty thousand rupees.

(5) Where a person contravenes any other provision of this Act or the rules made thereunder he shall, on conviction, be punishable with a fine which may extend to one lakh rupees.

(6) Notwithstanding anything contained in this Act, whoever makes any false and frivolous or vexatious complaint under this Act shall be punishable by the Registration and Grievance Redressal Authority with a fine which may extend to ten thousand rupees.

**XXX XXX XXX**

**21. Power of entry, inspection etc.-** (1) Subject to such rules as may be prescribed, the State Government may, specially authorise any officer of the State Government (hereinafter in this section and section 22 referred to as authorised officer) to,-

(a) enter, at all reasonable times, and with such assistants if any, being persons in the service of the State Government as he thinks fit, any place which is, or which he has reason to believe is being used as a Private Medical Establishment.

(b) Make such examination of the premises of a Private Medical Establishment and of any register, record, equipment, article or document found therein and seize any document or record as he may deem necessary for the purpose of examination,

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



analysis or investigation and retain them as long as he thinks it necessary to do so for such purpose, provided the authorised officer after seizing documents and records shall intimate the reason for such seizure to the Manager of the Private Medical Establishment as early as is practicable.

(c) Make such enquiry and take on the spot or otherwise the statement of any person as he deems necessary:

(d) Exercise such other powers as may be necessary; for carrying out the purposes of this Act.

Provided that, no person shall be required under this sub-section to answer any question or give any evidence tending to incriminate himself:

Provided further that, no residential accommodation (not being a Private Medical Establishment-cum-residence) shall be entered into and searched by the authorised officer except on the authority of a search warrant issued by a Magistrate having jurisdiction over the area and all searches and seizures under this section shall so far as may be, made in accordance with the provisions of the Code of Criminal Procedure , 1973 (Central Act 2 of 1974).

(2) The authorised officer shall make a report to the Registration and Grievance Redressal Authority regarding the result of the inspection, searches and seizure made by him under sub-section (1), and the Registration and Grievance Redressal Authority shall take necessary action on the said report under this Act.

**XXX** **XXX** **XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH